

ಆದರೂ ಶಫಿ ಕಳವಿಲೆ ಬಂದು ಆ ರೊಕ್ಕವನ್ನೂ ಒಯ್ದುಬಿಡುತ್ತಿದ್ದ. ‘ನಿದ್ದಿ, ನೀರಡಕಿ ಬಿಟ್ಟು ದುಡಿದ ರೊಕ್ಕನ ಪ್ಯಾಟಿಗೊಯ್ದು ದುಂದು ಮಾಡ್ತೀಯಲ್ಲೋ ಈ ವಯಸಿನಾಗೆ ನೀನು ದುಡಿದು ನನ್ನ ಸಾಕಬೇಕು. ಹರೇಕ್ಕ ಬಂದ್ರೂ ದುಡಿಮಿ ಮಾಡೋ ಚಿಂತಿ ತಟಗೂ ಇಲ್ಲ’ ಎಂದು ಬೈದರೂ ‘ಪ್ಯಾಟ್ಯಾಗೆ ಕ್ಲಬ್ ಮಾಡ್ತೀನಿ, ಸ್ವಲುಪ ತಡಿ ನಿನ್ನ ರೊಕ್ಕ ಯಾವನಿಗೆ ಬೇಕು, ತಂದು ಬಿಸಾಕ್ತೀನಿ’ ಅಂತಿದ್ದ.

ಫಾರಂ ಕೋಳಿ ವ್ಯಾಪಾರ ಯಾಕೋ ಕೈಗೊಡದಾದಾಗ ಹುಸೇನವ್ವ ಅದನ್ನ ಅಲ್ಲಿಗೇ ಬಿಟ್ಟು ಒಂದು ಸಣ್ಣ ಪೆಟಿಗಿ ಅಂಗಡಿ ಇಟಗೊಂಡಳು. ಮನಿ ಬಳಕಿ ಸಾಮಾನು, ಬಾಳಿಹಣ್ಣು, ಬೀಡಿ, ಕಡ್ಡಿಪೆಟಿಗಿ, ಮಕ್ಕಳಿಗೆ ಪೆಪ್ಪರಮೆಂಟು, ಕಡ್ಲಿಉಂಡಿ, ಸೀಬಿ ಹಣ್ಣು, ಇಂಥದನ್ನೆಲ್ಲ ಪ್ಯಾಟಿಗೆ ಹೋಗಿ ತಂದು ವ್ಯಾಪಾರ ಶುರು ಮಾಡಿದ್ದಳು. ಸಾಲಿಗೆ ಹೋಗೋ ಮಕ್ಕಳೇ ಹುಸೇನವ್ವನ ಕಾಯಂ ಗಿರಾಕಿಗಳು. ಮೂರು ಮೈಲಿ ನಡದು ಸಾಲಿಗೆ ಹೋಗೋ ಮೊದ್ಲು ಮಕ್ಕಳು ಹುಸೇನವ್ವನ ಅಂಗಡಿ ಮುಂದ ಕುಂತು ಹಣ್ಣು, ತಿಂಡಿ ಅದೂ ಇದೂ ತಿಂದು ಆಟ ಆಡಿ ಹೋಗುತ್ತಿದ್ದವು.

ಯಾವುದಾದ್ರು ಚಕ್ಕಡಿ ಬಂಡಿ ಸಾಲಿ ದಾರ್‍ಯಾಗೇ ಹೊಂಟಿತ್ತಂದ್ರೆ ಮಕ್ಕಳು ಕಾಡಿ ಬೇಡಿ ಬಂಡಿ ಹತ್ತಿ ಸಾಲಿಗೆ ಹೋಗುತ್ತಿದ್ದವು. ಬೇವಿನಹಳ್ಳಿಗೆ ದಿನಕ್ಕೆ ಮೂರೇ ಬಸ್ಸು ಬರುತ್ತಿದ್ದು, ಯಾವ ಬಸ್ಸೂ ಸಾಲಿ ಮಕ್ಕಳನ್ನು ಹತ್ತಿಸಿಕೊಳ್ಳುತ್ತಿದ್ದಿಲ್ಲ. ಒಮ್ಮೆ ಹುಸೇನವ್ವ ಮಕ್ಕಳೊಂದಿಗೆ ರಸ್ತೆಗೆ ಅಡ್ಡ ನಿಂತು ಮಕ್ಕಳನ್ನ ಯಾಕೆ ಹತ್ತಿಸಿಕೊಳ್ಳೋದಿಲ್ಲ ಎಂದು ಗಲಾಟೆ ಮಾಡಿದ್ದಳು. ಆದರೆ ಯಾವ ಪ್ರಯೋಜನವೂ ಆಗಿರಲಿಲ್ಲ. ಮಕ್ಕಳು ನಡೆದು ಹೋಗೋದೂ ತಪ್ಪಲಿಲ್ಲ.

ಬೇವಿನಹಳ್ಳಿಗೇ ಒಂದು ಸರ್ಕಾರಿ ಸಾಲಿ ತರ್‍ರಿ ಅಂತ ಗಂಗವ್ವ ಶಂಕರಪ್ಪಗೆ ಹೇಳಿ ಹೇಳಿ ಸಾಕಾತು. ಏನೇನೋ ಕಾನೂನು ಹೇಳಿ ಶಂಕರಪ್ಪ ಅದು ‘ಅಷ್ಟು ಸುಲಭ ಅಲ್ಲ’ ಅನ್ನುತ್ತಿದ್ದರು. ಅವರ ಇಬ್ಬರು ಮಕ್ಕಳು ಜಿಲ್ಲಾ ಕೇಂದ್ರ ದಾವಣಗೆರೆ ವಸತಿ ಶಾಲೆಯಲ್ಲಿ ಓದುತ್ತಿದ್ದರು. ಪಂಚಾಯ್ತಿ ಮೆಂಬರು, ಅಧ್ಯಕ್ಷ ಆದ ಮೇಲೂ ಊರಿಗೆ ಒಂದು ಸಾಲಿ ತರಲಿಲ್ಲ ಅಂದ್ರ ಹೆಂಗೆ? ಇದು ಗಂಗವ್ವನ ತಕರಾರು. ಅಂದಾಜು